ಶ್ರೀ ಎಂ. ನಾರಾಯಣಸ್ವಾಮಿ: ನಾನು ಕೇಳಿದ ಪ್ರಶ್ನೆ ಸರ್ವೆ ನಂಬರ್ 23ಕ್ಕೆ ಸಂಬಂಧಪಟ್ಟಂತೆ. ಆದರೆ ತಾವು ಹೇಳುತ್ತಿರುವುದು ಸರ್ವೆ ನಂಬರ್ 22ಕ್ಕೆ ಸಂಬಂಧಪಟ್ಟಂತೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಸರ್ವೆ ನಂಬರ್ 23 ಮತ್ತು 24 ಎರಡೂ ಕೂಡ ಹಿಡುವಳಿ ಜಮೀನುಗಳು. ಆರ್.ಟಿ.ಸಿ. ಪ್ರಕಾರ ಇವು ಸರ್ಕಾರಿ ಜಮೀನುಗಳಲ್ಲ. ಆದ್ದರಿಂದ ರೆಗ್ಯುಲರೈಸೇಷನ್, ಅನ್ ಆಥರೈಸ್ಡ್ ಎನ್ನತಕ್ಕ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಉತ್ತರಗಳು

ಗುಳ್ಳೇದಗುಡ್ಡ ಪುರಸಭೆಗೆ ಆರ್ಥಿಕ ನೆರವು

355 - ಶ್ರೀ ಹೆಚ್.ವೈ. ಮೇಟಿ (ಗುಳ್ಳೇದಗುಡ್ಡ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಗುಳ್ಳೇದಗುಡ್ಡ ಪುರಸಭೆಗೆ 1989-90, 1990-91ರ ಸಾಲಿಗೆ ಮಂಜೂರಾಗಿರುವ ಅನುದಾನಗಳು ಯಾವುವು?

2) ಜನವರಿ 1991ರವರೆಗೆ ಮಂಜೂರಾದ ಅನುದಾನದ ಮೊತ್ತವೇನು?

3) ಗುಳ್ಳೇದಗುಡ್ಡ ಪುರಸಭೆಗೆ ಆರ್ಥಿಕ ದುಸ್ಥಿತಿಯ ಬಗ್ಗೆ ಸರ್ಕಾರಕ್ಕೆ ತಿಳಿದು ಬಂದಿದೆಯೇ?

4) ಹಾಗಿದ್ದಲ್ಲಿ, ಸರ್ಕಾರವು ಗುಳ್ಳೇದಗುಡ್ಡ ಪುರಸಭೆಗೆ 1991-92 ಸಾಲಿಗೆ ಹೆಚ್ಚಿನ ಅನುದಾನವನ್ನು ನೀಡುತ್ತದೆಯೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

1)

	1989-90	1990-91
1.	ಜಕಾತಿ ಅನುದಾನ ರೂ.9,05,540-0	(1,2 ಮತ್ತು 3 ಕಂತು) ರೂ. 7,64,049-00
2.	ವಿವೇಚನಾತ್ಮಕ ಅನುದಾನ ರೂ. 1,00, 000-00	—
3.	ವಾಹನ ತೆರಿಗೆ ಅನುದಾನ ರೂ. 3,80,000-00	—

2) ಮೊದಲ, ಎರಡನೆಯ ಕಂತಿನ ಜಕಾತಿ ಅನುದಾನ ಮೊತ್ತ. ರೂ.5,09, 366-00.

3) ಗಮನಕ್ಕೆ ಬಂದಿರುತ್ತದೆ.

4) ಇದನ್ನು ಪರಿಶೀಲಿಸಲಾಗುವುದು.

ಕೃಷಿ ಕೈಗಾರಿಕಾ ನಿಗಮದಲ್ಲಿ ಅವ್ಯವಹಾರ

370 - ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಬೀದರ್): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಕೃಷಿ ಕೈಗಾರಿಕಾ ನಿಗಮವು ಇದುವರೆವಿಗೂ ಸುಮಾರು 6 ಕೋಟಿ

ರೂಪಾಯಿಗಳ ನಷ್ಟವನ್ನು ಅನುಭವಿಸಿರುವುದು ನಿಜವೇ?

ಆ) "ಗಾಲಾ" ಪಾನೀಯದ ಜಾಹೀರಾತಿಗಾಗಿ 18 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ನಿಗಧಿತ ಅವಧಿಯೊಳಗೆ ಮಾರಾಟ ಮಾಡಲು ಸಾಧ್ಯವಾಗದೇ 60 ಲಕ್ಷ ರೂಪಾಯಿ ಬೆಲೆಯ ಪಾನೀಯವನ್ನು ನಿಗಮ ನಾಶಗೊಳಿಸಿರುವುದು ನಿಜವೇ?

ಇ) "ಗಾಲಾ" ಪಾನೀಯದ ಮಾರಾಟವೂ ಸೇರಿದಂತೆ ನಿಗಮದ ಹಣ್ಣು ಸಂಸ್ಕರಣ, ಇಂಜಿನಿಯರಿಂಗ್ ವಿಭಾಗ ಹಾಗೂ ಇತರೆ ವಿಭಾಗಗಳಲ್ಲಿ ಭಾರಿ ಪ್ರಮಾಣದ ಅವ್ಯವಹಾರ ನಡೆದಿರುವುದು ನಿಜವೇ;

ಈ) ಈ ಅವ್ಯವಹಾರದ ಬಗ್ಗೆ ಸರ್ಕಾರದ ಕೃಷಿ ಇಲಾಖೆಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿ ತನ್ನ ವರದಿಯನ್ನು ಸರ್ಕಾರಕ್ಕೆ ನೀಡಿದೆಯೇ;

ಉ) ಹಾಗಿದ್ದಲ್ಲಿ, ಈ ವರದಿಯ ಆಧಾರದ ಮೇಲೆ ಸರ್ಕಾರ ರಾಜ್ಯ ಕೃಷಿ ಕೈಗಾರಿಕಾ ನಿಗಮದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) 1975-76 ರಿಂದ 1990ರ ವರೆವಿಗೆ ರಾಜ್ಯ ಕೃಷಿ ಕೈಗಾರಿಕಾ ನಿಗಮವು ಒಟ್ಟು 972.48 ಲಕ್ಷ ರೂಪಾಯಿಗಳ ನಷ್ಟವನ್ನು ಅನುಭವಿಸಿದೆ.

ಆ) 1986-87 ರಿಂದ ಮಾರ್ಚ್ 1991ರ ಅವಧಿಯಲ್ಲಿ ಗಾಲ ಜಾಹಿರಾತಿಗಾಗಿ ಒಟ್ಟು 59 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ನಿಗಮದ ಆಡಳಿತ ಮಂಡಲಿ ಅವಧಿ ಮೀರಿದ 7.43 ಲಕ್ಷ ರೂ.ಗಳ ಬೆಲೆಬಾಳುವ ಗಾಲ ಪಾನೀಯದ ದಾಸ್ತಾನನ್ನು ಮನ್ನಾ ಮಾಡಲು ನಿರ್ಧರಿಸಿತು. ಇನ್ನೂ 3.91 ಲಕ್ಷ ರೂ.ಗಳ ಬೆಲೆಬಾಳುವ ಗಾಲ ಪಾನೀಯದ ದಾಸ್ತಾನು ಅವಧಿ ಮೀರಿರುವ ಕಾರಣದಿಂದ ಹಾಗೆಯೇ ಉಳಿದಿದ್ದು, ಅದನ್ನು ಮನ್ನಾ ಮಾಡಲು ಆಡಳಿತ ಮಂಡಳಿ ನಿರ್ಧರಿಸಬೇಕಾಗಿದೆ.

ಇ) ಕೃಷಿ ಕೈಗಾರಿಕಾ ನಿಗಮದ ಎಲ್ಲಾ ವಿಭಾಗಗಳಲ್ಲಿ ಅವ್ಯವಹಾರ ನಡೆದಿರುವುದು ಕಂಡು ಬಂದ ತಕ್ಷಣವೇ ಸಂಬಂಧಪಟ್ಟವರ ಮೇಲೆ ಸೇವಾ ನಿಯಮದ ಪ್ರಕಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗಿದೆ.

ಈ) ಸಮಿತಿ ರಚಿಸಿಲ್ಲ. ಕಾರ್ಯದರ್ಶಿಗಳನ್ನು ಸಂಬಂಧಿತ ವಿಷಯದ ಮೇಲೆ ಪರಿಶೀಲಿಸಿ ವರದಿ ನೀಡಲು ತಿಳಿಸಲಾಗಿದೆ.

ಉ) ಪರಿಶೀಲನಾ ಹಂತದಲ್ಲಿದ್ದು, ಇನ್ನೂ ವರದಿ ಕಾರ್ಯದರ್ಶಿಗಳಿಂದ ಬಂದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಅಧ್ಯಕ್ಷರೆ ದಿನಾಂಕ 7.3.91ರ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರಿನಲ್ಲಿ ತರಕಾರಿಗಳಿಗೆ ಸರಿಯಾದ ಬೆಲೆ ದೊರೆಯದಿರುವುದು

18 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ರೈತರು ಬೆಳೆದ ತರಕಾರಿಗಳಿಗೆ ಬೆಂಗಳೂರು ನಗರದಲ್ಲಿ ಸರಿಯಾದ ಬೆಲೆಗಳು ದೊರೆಯದೆ ಇದ್ದುದರಿಂದ ಇವುಗಳನ್ನು ಪಕ್ಕದ ರಾಜ್ಯಗಳಾದ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ಕಳುಹಿಸಿ ಕೊಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರಿ ರೈತರಿಗೆ ನ್ಯಾಯ ಬೆಲೆ ಸಿಗುವಂತೆ ಮಾಡಲು